## ಹೂ ಮಿಡತೆ

ಚಿತ್ರದಲ್ಲಿರುವ ಅಂದವಾದ ಹೂ ಮಿಡತೆ. ಇದು ರಾಕೇಶ ಮಲ್ಲಮ್ಮನವರ ಎಂಬ ಛಾಯಾಗ್ರಾಹಕರಿಗೆ ಅವರ ತೋಟದಲ್ಲಿ ಕಂಡಿದೆ. ಸಂಧಿಪದಿ ವಂಶದ ಹೈಮೆನೊಪೊಟಿಡೇ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಕ್ರಿಯೋಬ್ರಾಟರ್ ಪಿಕ್ಟಿಪೆನಿಸ್. ಹೂ ಮಿಡತೆಯ ಬಹು ಭಾಗ ಕೆನೆ ಬಿಳಿ ಬಣ್ಣದ್ದಾಗಿದೆ. ಉದರದ ಮೇಲೆ ಹಸಿರುಕಂದು ಮಚ್ಚೆಗಳು, ಕಾಲಿನ ಮೇಲೆ ಹಸಿರುಕಂದು ಪಟ್ಟಿಗಳಿವೆ. ರೆಕ್ಕೆಗಳು ಹಸಿರು ಬಣ್ಣವಿದ್ದೂ, ಬಿಳಿ ಹಳದಿ ಕಣ್ಣುಗಳಿದ್ದವು. ಇದು ಎರಡರಿಂದ ಮೂರು ಸೆಂ.ಮೀ. ಉದ್ದವಾಗಿತ್ತು.

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು





## ಗುಡ್ಡದ ಪಾದ

ಈ ಚಿತ್ರ ನಮ್ಮೂರಿನ ಗುಡ್ಡದಲ್ಲಿ ತೆಗಿದಿದ್ದು. ಬಹುಶಃ ನೂರಾರು ವರ್ಷಗಳ ಹಿಂದೆ ಗುಡ್ಡವು ಲಾವಾರಸ ಹಂತದಿಂದ ಮುಂದುವರಿದು ಶಿಲೆಯಾಗಿ ಗಟ್ಟಿಗೊಳ್ಳುವ ಪ್ರಕ್ರಿಯೆಯಲ್ಲಿ ಉಂಟಾಗಿರಬಹುದಾದ ಸಣ್ಣ ಸಣ್ಣ ಕುಳಿಗಳಿವು. ಕಾಲಾಂತರದಲ್ಲಿ ಪ್ರತಿ ಬಾರಿ ಮಳೆ ಸುರಿದಾಗಲೂ ಈ ಕುಳಿಗಳು ಮಳೆನೀರಿನಿಂದ ತುಂಬಿ, ಥೇಟ್ ಮನುಷ್ಯನ ಬಲಗಾಲಿನ ಪಾದವನ್ನೇ ಹೋಲುವಂತೆ ರೂಪುಗೊಂಡಿವೆ. ಈ ಅಪರೂಪದ ರಚನೆಗಳು ಗುಡ್ಡದ ತಳಭಾಗದಲ್ಲಿರುವುದನ್ನು ನೋಡಿದರೆ ಗುಡ್ಡವೇ ಇಲ್ಲಿ ಕಾಲೂರಿ ನಿಂತಂತಿದೆ.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

## ಹಲಸು ಗಣಪ!

ಪ್ರಕೃತಿಯ ವೈಚಿತ್ರ್ಯ ಒಮ್ಮೊಮ್ಮೆ ಗಿಡ, ಮರ, ಬೇರು, ಬಳ್ಳಿ, ಕಾಯಿ, ಹಣ್ಣುಗಳಲ್ಲಿ ಅಪರೂಪವೆಂಬಂತೆ ಕಾಣಸಿಗುತ್ತವೆ. ಅದು ಹಣ್ಣು ಆದರೆ ಪಕ್ಷಿಯ ಆಕಾರವನ್ನೋ, ಪ್ರಾಣಿಯ ಆಕಾರವನ್ನೋ ತಾಳಿರುತ್ತದೆ.

ಇದೀಗ ಹಲಸಿನಹಣ್ಣಿನ ಸೀಸನ್. ಚಿತ್ರದಲ್ಲಿರುವ ಹಲಸಿನಕಾಯಿ ಗಣೇಶನ ಅವತಾರ ತಾಳಿದೆ. ಸೊಂಡಿಲು ಹೊತ್ತ ಹಸುರು ಗಣೇಶ ನೋಡಲು ಸುಂದರವಾಗಿದ್ದಾನೆ. ಅಂದ ಹಾಗೆ ಶಿವಮೊಗ್ಗ ಜಿಲ್ಲೆ ಸೊರಬ ಸಮೀಪದ ಮೂಡುಗೋಡು ಎಂಬ ಹಳ್ಳಿಯ ಗೌಡರ ಮನೆಯಲ್ಲಿ ಈ ಹಲಸು ಗಣೇಶ ಕಾಣಸಿಕ್ಕಿದೆ. ಅದನ್ನು ಮೂಡುಗೋಡು ಮಹಾಬಲೇಶ್ವರ ಭಟ್ ಅವರು ಕ್ಲಿಕ್ಕಿಸಿದ್ದಾರೆ. ಇದೇ ರೀತಿ ಇಲ್ಲಿನ ಮರದಲ್ಲಿ ಬಿಟ್ಟ ಹಲಸು ಬೇರೆ ಬೇರೆ ರೂಪ ತಾಳಿ ನೋಡುಗರ ಗಮನಸೆಳೆಯುತ್ತಿದೆ.

—ಹೇಮಾವತಿ ಉಂಡೆಮನೆ, ಮೈಸೂರು

